**S.C. 20/2022.**

# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.

## <u>ಸತ್ರ ಮೊಕದ್ದಮೆ ಸಂಖ್ಯೆ: 20/2022.</u>

| | | | |
|---|---|---|---|
| ಹೆಸರು | : | ಶಿವಲಿಂಗಪ್ಪಗೌಡ ಪಾಟೀಲ | ಫ್ರಾಸಾ-18 |
| ತಂದೆಯ ಹೆಸರು | : | ಬಾಬುಗೌಡ | ಚಾಸಾ-44 |
| ವಯಸ್ಸು | : | 40 ವರ್ಷ | |
| ಉದ್ಯೋಗ | : | ಪಿ.ಎಸ್.ಐ | |
| ವಾಸಸ್ಥಳ | : | ಝುಳಕಿ | |

ದಿನಾಂಕಃ 08-11-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.</u>**

ದಿನಾಂಕಃ 31-08-2021 ರಿಂದ 28-06-2023 ರವರೆಗೆ ಇಳಕಲ್ ಪೋಲಿಸಠಾಣೆಯಲ್ಲಿ ಪಿ.ಎಸ್.ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 17-11-2021 ರಂದು ಮಧ್ಯಾಹ್ನ 2.30 ಗಂಟೆಗೆ ಚಾಸಾ-1 ಹಾಜರಾಗಿ ಗಣಕೀಕೃತ ಪಿರ್ಯಾದಿ ನೀಡಿದ್ದು ಅದನ್ನು ನಮ್ಮ ಠಾಣಾ ಗುನ್ನಾ ನಂ.98/2021 ರಲ್ಲಿ ಗುನ್ಹೆ ದಾಖಲು ಮಾಡಿಕೊಂಡು ಎಫ್ ಆಯ್ ಆರ್ ಅನ್ನು ನ್ಯಾಯಾಲಯಕ್ಕೆ ರವಾನಿಸಿದ್ದೇನೆ. ಪಿರ್ಯಾದಿಯನ್ನು ಈಗಾಗಲೇ ನಿಪಿ-1 ಅಂತಾ ಗುರುತಿಸಲಾಗಿದ್ದು, ಸಹಿಯನ್ನು ನಿಪಿ-1(ಬಿ) ಅಂತಾ ಗುರುತಿಸಲಾಯಿತು. ಎಫ್ ಆಯ್ ಆರ್ ಅನ್ನು ನಿಪಿ-32 ಮತ್ತು ಸಹಿಯನ್ನು ನಿಪಿ-32(ಎ) ಅಂತಾ ಗುರುತಿಸಲಾಯಿತು. ನಂತರ ಮುಂದಿನ ತನಿಖೆಯನ್ನು ಚಾಸಾ-45 ಇವರಿಗೆ ವಹಿಸಿಕೊಟ್ಟಿದ್ದೇನೆ.

ಅದೇ ದಿನ ಆರೋಪಿತರನ್ನು ದಸ್ತಗಿರಿ ಮಾಡುವಂತೆ ಚಾಸಾ-45 ಆದೇಶಿಸಿದ್ದು ಆರೋಪಿ-1,2 ಇವರನ್ನು ದಸ್ತಗಿರಿ ಮಾಡಿ ಚಾಸಾ-45 ರ ಮುಂದೆ ಹಾಜರುಪಡಿಸಿದ್ದೇನೆ. ಆ ಬಗ್ಗೆ ವರದಿ ನೀಡಿದ್ದು ಅದನ್ನು ನಿಪಿ-33 ಅಂತಾ, ಸಹಿಯನ್ನು ನಿಪಿ-33(ಎ) ಅಂತಾ ಗುರುತಿಸಲಾಯಿತು.

ದಿನಾಂಕಃ 18-11-2021 ರಂದು ಆರೋಪಿತರನ್ನು ದಸ್ತಗಿರಿ ಮಾಡುವಂತೆ ಚಾಸಾ-45 ಆದೇಶಿಸಿದ್ದು ಆರೋಪಿ-3 ರಿಂದ 5 ಇವರನ್ನು ದಸ್ತಗಿರಿ ಮಾಡಿ ಚಾಸಾ-45 ರ ಮುಂದೆ ಹಾಜರುಪಡಿಸಿದ್ದೇನೆ. ಆ ಬಗ್ಗೆ ವರದಿ ನೀಡಿದ್ದು ಅದನ್ನು ನಿಪಿ-34 ಅಂತಾ, ಸಹಿಯನ್ನು ನಿಪಿ-34(ಎ) ಅಂತಾ ಗುರುತಿಸಲಾಯಿತು.

ದಿನಾಂಕಃ 17-11-2021 ರಂದು ಚಾಸಾ-45 ಇವರ ಆದೇಶದ ಮೇರೆಗೆ ಪಿಸಿ-1627 ಮತ್ತು 1713 ಇವರ ಜೊತೆ ಶವವನ್ನು ಹುಡುಕಿದ್ದೇನೆ. ಪಿಸಿ-1627 ಮತ್ತು 1713 ಇವರನ್ನು ಸಾಕ್ಷಿಯನ್ನಾಗಿ ನಮೂದಿಸಿಲ್ಲ. ಶವ ಪತ್ತೆಯಾಗದ ಕಾರಣ ಅಗ್ನಿಶಾಮಕ ದಳಕ್ಕೆ ಅರ್ಜಿ ಬರೆದಿದ್ದೇನೆ. ಶವ ಪತ್ತೆಯಾಗಿಲ್ಲ ಎಂದು ವರದಿ ನೀಡಿದ್ದು ಅದನ್ನು ನಿಪಿ-35 ಅಂತಾ, ಸಹಿಯನ್ನು ನಿಪಿ-35(ಎ) ಅಂತಾ ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿದ್ದೇನೆ.

**<u>ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎ.ಬಿ.ಜೆ ವಕೀಲರಿಂದ.</u>**

ಪಿರ್ಯಾದಿ ನೀಡಲು ಚಾಸಾ-1 ಒಬ್ಬರೇ ಬಂದಿದ್ದರು. ಗಣಕೀಕೃತ ಪಿರ್ಯಾದಿಯನ್ನು ಎಲ್ಲಿ ತಯಾರಿಸಿದ್ದರು ಎಂದು ಕೇಳಿಲ್ಲ. ದಿನಾಂಕಃ 17-11-2021 ಕ್ಕಿಂತ ಮುಂಚೆ 1 ನೇ ಆರೋಪಿಯನ್ನು ದಿನಾಂಕಃ 01-11-2021 ರಂದು ನಮ್ಮ ಠಾಣಾ ಗುನ್ನಾ ಸಂಖ್ಯೆ 94/2021 ರಲ್ಲಿ ಪಿರ್ಯಾದಿ ನೀಡಲು ಬಂದಿದ್ದರು ಆಗ ನೋಡಿದ್ದೆ. ಸದರಿ ಗುನ್ನೆ ನಾನು ನೊಂದಣಿ ಮಾಡಿಲ್ಲ, ನಮ್ಮ ಸಿಬ್ಬಂದಿ ಮಾಡಿಕೊಂಡಿದ್ದಾರೆ. ಪಿರ್ಯಾದಿಯ ಒಳಾಂಶಗಳನ್ನು ನಮೂದು ಮಾಡಿದ್ದೇನೆ. ಅದರಲ್ಲಿ ಮೊಬೈಲ್ ನಂಬರು ನಮೂದಿಸಿದ್ದಾರೆ ಎನ್ನುವುದು ನಿಜ, ಲೊಕೇಷನ್ ಮತ್ತು ಸಿ.ಡಿ.ಆರ್ ತೆಗೆಯಲು ಪ್ರಯತ್ನ ಮಾಡಿದ್ದೆ ಬರಲಿಲ್ಲ ಆದಕಾರಣ ಲೊಕೇಷನ್ ಮತ್ತು ಸಿ.ಡಿ.ಆರ್ ಸಿಗಲಿಲ್ಲ. ಲೊಕೇಷನ್ ಮತ್ತು ಸಿ.ಡಿ.ಆರ್ ಬಗ್ಗೆ ಪ್ರಯತ್ನ ಮಾಡಿದ್ದು ಹಾಗೂ ಸಿಗದೇ ಇರುವ ಬಗ್ಗೆ ವರದಿ ಮಾಡಿಲ್ಲ.

ದಿನಾಂಕಃ 17-11-2021 ರಂದು ಮಧ್ಯಾಹ್ನ 3.45 ಗಂಟೆಗೆ ಮುಂದಿನ ತನಿಖೆಯನ್ನು ಚಾಸಾ-45 ಇವರಿಗೆ ಕೊಟ್ಟಿದ್ದೇನೆ. ದಿನಾಂಕಃ 17-11-2021 ರಂದು

ಆರೋಪಿತರನ್ನು ದಸ್ತಗಿರಿ ಮಾಡುವ ಕುರಿತು ಮೆಮೋ ಯಾವ ಸಮಯಕ್ಕೆ ಕೊಟ್ಟಿದ್ದಾರೆ ಗೊತ್ತಿಲ್ಲ.

2 ನೇ ಆರೋಪಿಯನ್ನು ನಾನು ಮೊದಲು ನೋಡಿರಲಿಲ್ಲ, ಅವನನ್ನು ದಸ್ತಗಿರಿ ಮಾಡಲು ಅವನ ಬಗ್ಗೆ ನಾನು ಬೇರೆಯವರನ್ನು ವಿಚಾರಣೆ ಮಾಡಿಲ್ಲ, ಮೊಬೈಲ್ ನಂಬರ ಆಧಾರದ ಮೇಲಿಂದ ದಸ್ತಗಿರಿ ಮಾಡಿದ್ದೇನೆ. 2 ನೇ ಆರೋಪಿಯನ್ನು ನಾನು ಅವರ ಮನೆಯಿಂದ ಕರೆದುಕೊಂಡು ಬರುವಾಗ ಅವರ ಮನೆಯವರಿಗೆ ಇಂತಹ ಪ್ರಕರಣದಲ್ಲಿ ದಸ್ತಗಿರಿ ಮಾಡುತ್ತೇನೆ ಎಂದು ಹೇಳಿ ಕರೆದುಕೊಂಡು ಹೋಗಿಲ್ಲ. 2 ನೇ ಆರೋಪಿ ಈ ಪ್ರಕರಣದಲ್ಲಿ ಭಾಗಿ ಇಲ್ಲದೇ ಇದ್ದರೂ ಸಹಿತ ಉದ್ದೇಶಪೂರ್ವಕವಾಗಿ ನಾನು ಅವರನ್ನು ಚಾಸಾ-45 ರ ಮುಂದೆ ಹಾಜರುಪಡಿಸಿದ್ದೇನೆ ಎನ್ನುವುದು ಸರಿಯಲ್ಲ. ಉಳಿದ ಆರೋಪಿತರನ್ನು ದಸ್ತಗಿರಿ ಮಾಡಲು ಮೆಮೋ ನೀಡಿದ ಸಮಯ ಹಾಗೂ ನಾನು ಪಡೆದ ಸಮಯ ನಮೂದಿಸಿಲ್ಲ.

ಆರೋಪಿ-3 ರಿಂದ 5 ಇವರನ್ನು ನಾನು ಮೊದಲು ನೋಡಿರಲಿಲ್ಲ. ಅವರನ್ನು ನಾನು ಯಾವ ಆಧಾರದ ಮೇಲೆ ದಸ್ತಗಿರಿ ಮಾಡಿದ್ದೇನೆ, ಆರೋಪಿ-1 ಮತ್ತು 2 ರ ಸ್ವಖುಷಿ ಹೇಳಿಕೆ ಆಧಾರದ ಮೇಲೆ ದಸ್ತಗಿರಿ ಮಾಡಿದ್ದೇನೆ. ಆರೋಪಿ-3 ರಿಂದ 5 ರ ಮನೆಯಲ್ಲಿ ದಸ್ತಗಿರಿ ಮಾಡುವ ಪೂರ್ವದಲ್ಲಿ ಪ್ರಕರಣದ ಬಗ್ಗೆ ಮಾಹಿತಿ ತಿಳಿಸಿ ದಸ್ತಗಿರಿ ಮಾಡಿದ್ದೇನೆ. ನಿಪಿ-34,35 ರಲ್ಲಿ ಪ್ರಕರಣದ ಬಗ್ಗೆ ಅವರ ಮನೆಯಲ್ಲಿ ತಿಳಿಸಿದ ಕುರಿತು ನಮೂದಿಸಿಲ್ಲ.

ಶವ ಹುಡುಕಿದರೂ ಸಿಗಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅಗ್ನಿಶಾಮಕ ದಳದವರನ್ನು ನೇಮಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿ-1 ರಿಂದ 5 ಇವರು ಆರೋಪದಲ್ಲಿ ಭಾಗಿಯಾಗದೇ ಇದ್ದರೂ ಸಹಿತ ಅವರನ್ನು ದಸ್ತಗಿರಿ ಮಾಡಿರುವುದು ತಪ್ಪು ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

08-11-2024
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.